ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ
ನ್ಯಾಯಾಲಯ, ಮಡಿಕೇರಿ.

# ಸಿ. ಸಿ. ಸಂಖ್ಯೆಃ 2072/24

ಪಿಡಬ್ಲ್ಯುಃ - 1

ದಿನಾಂಕಃ22.03.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಪಿ ಹೆಚ್ ಟಿ ವಕೀಲರಿಂದಃ-

6. ಸಾಕ್ಷಿಗೆ ದಿಃ27.02.2024 ರ ದೂರಿನ ದೃಢೀಕೃತ ದಾಖಲೆಯನ್ನು ತೋರಿಸಲಾಯಿತು. ಸಾಕ್ಷಿ ಅದನ್ನು ನೋಡಿ ಸದರಿ ದೂರನ್ನು ನೀವೇ ಬರೆದಿದ್ದೀರಾ ಎಂದರೆ ಸಾಕ್ಷಿ ನನ್ನ ಮಗಳು ಬರೆದಿದ್ದಾಳೆ ಎಂದು ಒಪ್ಪಿರುತ್ತಾರೆ. ಸಾಕ್ಷಿ ಒಪ್ಪಿದ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಆರೋಪಿಗೆ ಯಾವ ದಿನಾಂಕದಂದು ಎಷ್ಟು ಹಣವನ್ನು ಕೊಟ್ಟಿದ್ದೀರ ಎಂದು ದಿನಾಂಕ ಮತ್ತು ಹಣದ ಮೊತ್ತವನ್ನು ಹೇಳಲು ಆಗುತ್ತದೆಯಾ ಎಂದರೆ ಮೊದಲು ರೂ.5 ಲಕ್ಷ ಹಣವನ್ನು ಆರೋಪಿ ಮತ್ತು ಗಿರೀಶ ಇಬ್ಬರೂ ಒಟ್ಟಿಗೆ ಬಂದು ನಮ್ಮ ಮನೆಯಲ್ಲೇ ಹಣ ಪಡೆದಿದ್ದಾರೆ. ದಿನಾಂಕ ನನಗೆ ಹೇಳಲು ಆಗುವುದಿಲ್ಲ. ಆರೋಪಿ ಮತ್ತು ಗಿರೀಶ ಇಬ್ಬರೂ ಒಟ್ಟಿಗೆ ಮನೆಗೆ ಬಂದು ರೂ.5 ಲಕ್ಷವನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ದೂರಿನಲ್ಲಿ ಬರೆಸಿದ್ದೀರಾ ಎಂದರೆ ಬರೆಸಿರುವುದಿಲ್ಲ. ದಿಃ 04.12.2022 ರಂದು ರೂ.50 ಸಾವಿರ ಹಣವನ್ನು ಅಕೌಂಟ್ ಮೂಲಕ ಗಿರೀಶ್ ಎನ್ನುವವರಿಗೆ ವರ್ಗಾಯಿಸಿದ್ದೇವೆ ಎಂದು ದೂರಿನಲ್ಲಿ ಬರೆದಿದೆ ಎಂದರೆ ಸರಿ. ಆದರೆ ನನ್ನ ಮಗಳು ದೂರಿನಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ಆರೋಪಿಯ ಮೇಲೆ ಆರು ಕೇಸುಗಳನ್ನು ದಾಖಲಿಸಿದ್ದೇನೆ. ಇದೇ ನ್ಯಾಯಾಲಯದಲ್ಲಿ 5 ಚೆಕ್ ಕೇಸುಗಳನ್ನು, ಮತ್ತೊಂದು ನ್ಯಾಯಾಲಯದಲ್ಲಿ 420 ಕೇಸನ್ನು ಹಾಕಿದ್ದೇನೆ. ಸದರಿ ಕೇಸುಗಳ ನಂಬರ್ ಗಳನ್ನು ನನಗೆ ಹೇಳಲು ಆಗುವುದಿಲ್ಲ.

7. ದಿಃ 23.02.2023 ರಂದು ರೂ.2 ಲಕ್ಷ ಹಣವನ್ನು ನೇರವಾಗಿ ನಾನು ಗಿರೀಶನ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದೇನೆ ಎಂದರೆ ಸರಿ. ಅದನ್ನು ದೂರಿನಲ್ಲಿ ಬರೆದಿದೆ ಎಂದರೆ ಸರಿ. ದಿಃ 04.03.2023 ರಂದು ರೂ.3,95,000/-, ಅದೇ ದಿನ ರೂ.3,60,000/-, ದಿಃ 17.08.2023 ರಂದು ರೂ.72 ಸಾವಿರ, ದಿಃ 29.09.2022 ರ ಮತ್ತು ದಿಃ 07.09.2023 ರ ಮಧ್ಯದಲ್ಲಿ ಒಟ್ಟು ರೂ.2,00,000/- ಅಂದರೆ ಒಟ್ಟು ರೂ.18 ಲಕ್ಷ ಹಣವನ್ನು ಗಿರೀಶನ ಖಾತೆಗೆ ವರ್ಗಾಯಿಸಲಾಗಿದೆ ಎಂದು ನಾನು ದೂರಿನಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ನಾನು ಜಗದೀಶನ ಅಂದರೆ ಆರೋಪಿಯ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನನ್ನ ಮಗಳಿಗೆ ಕೆಲಸ ಬೇಡ ನಾವು ಕೊಟ್ಟ 18 ಲಕ್ಷ ಹಣವನ್ನು ವಾಪಾಸ್ಸು ಕೊಡಿ ಎಂದು ನಾನು ಕೇಳಿದ್ದೇನೆ ಎಂದರೆ ಸರಿ. ನಾನು ನೇರವಾಗಿ ಗಿರೀಶನ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿದ್ದೇನೆ ಹಾಗೂ ಜಗದೀಶನ ಜೊತೆ ಯಾವುದೇ ವ್ಯವಹಾರವನ್ನು ನೇರವಾಗಿ ಮಾಡಿಲ್ಲ ಎಂದರೆ ಗಿರೀಶ್ ಅವರು ಜಗದೀಶ್ ಅವರ ಅಕೌಂಟ್ ಗೆ ಹಣ ಹಾಕಿದ ಬಗ್ಗೆ ನಮಗೆ ಮಾಹಿತಿಯನ್ನು ಮೊಬೈಲ್ ನಲ್ಲಿ ಕಳುಹಿಸುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

8. ಜಗದೀಶನ ಜೊತೆ ಫೋನಿನಲ್ಲಿ ಮಾತನಾಡಿದ್ದೇನೆ ಎಂದು ಈ ಪ್ರಕರಣದ ದೂರಿನಲ್ಲಿ ಬರೆಸಿದ್ದೀರ ಯಾವ ದಿನಾಂಕಂದು ಆರೋಪಿಯ ಜೊತೆ ಮಾತನಾಡಿದ್ದೀರಾ ಎಂದರೆ ದಿನಾಂಕದ ಬಗ್ಗೆ ನೆನಪಿಲ್ಲ. ನಾನು ನೇರವಾಗಿ ಆರೋಪಿಗೆ ಫೋನ್ ಪೇ ಮೂಲಕವಾಗಲಿ, ಆನ್ ಲೈನ್ ಮೂಲಕವಾಗಿಲಿ ಹಣವನ್ನು ಹಾಕಿಲ್ಲ ಆದರೆ ಗಿರೀಶನ ಮೂಲಕ ಆರೋಪಿಗೆ ಕಳುಹಿಸಿದ್ದೇನೆ. ಆರೋಪಿ ನನಗೆ 2023 ರಿಂದ ಪರಿಚಯ. ನಿಡಿ-1 ದೂರನ್ನು ನಾನು ಗಿರೀಶನ ಮೇಲೆ ಮಾತ್ರ ಕೊಟ್ಟಿದ್ದೇನೆ ಎಂದರೆ ಇಬ್ಬರು ಮೇಲೂ ಅಂದರೆ ಗಿರೀಶ್ ಮತ್ತು ಜಗದೀಶನ ಮೇಲೆ ಕೊಟ್ಟಿದ್ದೇನೆ. ನಿಡಿ-1 ರ ಮೇಲೆ ದಾಖಲಾಗಿರುವ ಪ್ರಕರಣ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನ್ಯಾಯಾಲಯದಲ್ಲಿ ಮತ್ತು ಪೊಲೀಸ್ ಠಾಣೆಯಲ್ಲಿ ಮಾತ್ರ ನೋಡಿದ್ದೇನೆ ಎಂದರೆ ನಾನು, ನನ್ನ ಮಗಳು ಆರೋಪಿಯ ಮನೆಗೂ ಸಹ ಹೋಗಿ ಬಂದಿದ್ದೇವೆ. ಅಲ್ಲಿಗೆ ಗಿರೀಶ್ ಅವರೇ ನಮ್ಮನ್ನು ಕರೆದುಕೊಂಡು ಹೋಗಿದ್ದಾರೆ.

9. ನಾನು ಈ ಪ್ರಕರಣದಲ್ಲಿ ಎಲ್ಲೂ ಆರೋಪಿಗೆ ನೇರವಾಗಿ ಹಣ ಕೊಟ್ಟಿದ್ದೇನೆ ಎಂದು ಹೇಳಿಲ್ಲ ಹಾಗೂ ಅದನ್ನು ನಾನು ನನ್ನ ದೂರಿನ ಕಂಡಿಕೆ 7 ರಲ್ಲಿ ಹೇಳಿದ್ದೇನೆ ಎಂದರೆ ಸರಿ. ಆದರೆ ಒಮ್ಮೆ ನಮ್ಮ ಮನೆಗೆ ಗಿರೀಶನ ಜೊತೆ ಬಂದಿದ್ದರು. ಆ ಸಮಯದಲ್ಲಿ ರೂ.5 ಲಕ್ಷ ಹಣವನ್ನು ನಮ್ಮಿಂದ ಪಡೆದು ಹೋಗಿದ್ದಾರೆ. ಆದರೆ ಆ ಬಗ್ಗೆ ನಿಡಿ-1 ರಲ್ಲಿ ಮಗಳು ಬರೆಯಲು ಬಿಟ್ಟು ಹೋಗಿದೆ. ನಾನು ಯಾವ ದಿನಾಂಕದಂದು 5 ಲಕ್ಷ ಕೊಟ್ಟಿದ್ದೇನೆ ಎಂದು ಮರೆತು ಹೋಗಿದೆ.

10. ಗಿರೀಶ್ ಮಡಿಕೇರಿಯ ಅಶೋಕಪುರದಲ್ಲಿ ನನಗೆ ಪರಿಚಯ ಆದರು. ನಾನು ನನ್ನ ಮಗಳ ನೌಕರಿಗೆ ಸಂಬಂಧ ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ, ನನ್ನ ಮಗಳಿಗೆ ಗೊತ್ತಿರಬಹುದು. ಸದರಿ ಅರ್ಜಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿರಬಹುದು. ಅದರ ಬಗ್ಗೆ ದೂರಿನಲ್ಲಿ ಬರೆದಿದ್ದೇನೋ ಇಲ್ಲವೋ ಗೊತ್ತಿಲ್ಲ, ದೂರನ್ನು ನನ್ನ ಮಗಳು ಬರೆದಿದ್ದಾಳೆ, ಅವಳಿಗೆ ಅದರ ಬಗ್ಗೆ ಗೊತ್ತಿದೆ. ಈ ಪ್ರಕರಣದ ವ್ಯವಹಾರ ನನಗೂ ಮತ್ತು ಗಿರೀಶನಿಗೂ ನಡೆದಿದೆಯೇ ವಿನಃ ನನಗೂ ಮತ್ತು ಜಗದೀಶನಿಗೂ ನಡೆದಿಲ್ಲ ಎಂದರೆ ಸಾಕ್ಷಿ ವ್ಯವಹಾರ ನಡೆದಿರುವ ಕಾರಣ ಆರೋಪಿ ಚೆಕ್ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

11. ಆರೋಪಿ ನನಗೆ 2024 ರಲ್ಲಿ ನನಗೆ ಪರಿಚಯವಾದರು ಎಂದರೆ ಸರಿಯಲ್ಲ. ಆರೋಪಿ ಮೊದಲ ಬಾರಿಗೆ ಮಡಿಕೇರಿಯ ಪೊಲೀಸ್ ಠಾಣೆಯಲ್ಲಿ ನನಗೆ ಪರಿಚಯ ಆಗಿದ್ದಾರೆ ಎಂದರೆ ಸುಳ್ಳು. ನಾನು ಆರೋಪಿಯ ಮನೆಯನ್ನು ನೋಡಿಲ್ಲ, ಆರೋಪಿಯ ಮನೆಗೆ ಹೋಗಿಲ್ಲ, ಆರೋಪಿಯ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಹಾಗೂ ನಾನು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲೇ 18 ಲಕ್ಷದ ವ್ಯವಹಾರವನ್ನು ಆರೋಪಿಯ ಜೊತೆ ಮಾಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಆರೋಪಿಯೇ ನನಗೆ ಚೆಕ್ ಕೊಟ್ಟಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಗಿರೀಶನಿಗೂ ಜಗದೀಶನಿಗೂ ಇದ್ದ ಹಣದ ವ್ಯವಹಾರಕ್ಕೆ ಭದ್ರತೆಗಾಗಿ ಆರೋಪಿ ಗಿರೀಶನಿಗೆ ಚೆಕ್ಕುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ.

12. ಆರೋಪಿಗೆ ತೊಂದರೆ ಕೊಡಲು ನಾನು ಮತ್ತು ಗಿರೀಶ ಸೇರಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ರೂ.12,50,000/- ಹಣವನ್ನು ನಾನು ಗಿರೀಶನನ್ನು ಮನೆಗೆ ಕರೆದು ಗಿರೀಶನಿಗೆ ನೇರವಾಗಿ ಹಣ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಒಂದು ಬಾರಿ ಜಗದೀಶ್ ಮತ್ತು ಗಿರೀಶ ಇಬ್ಬರೂ ಬಂದು 5 ಲಕ್ಷ ಪಡೆದಿದ್ದಾರೆ, ಮತ್ತೊಮ್ಮೆ ಗಿರೀಶ ಬಂದು ಉಳಿದ ಹಣವನ್ನು ಪಡೆದಿದ್ದಾರೆ. ನಾನು ಈ ಪ್ರಕರಣದಲ್ಲಿ ಗಿರೀಶನಿಗೆ ಹಣ ಕೊಟ್ಟಿದ್ದೇನೆ ಹಾಗೂ ಅವರ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಿದ್ದೇನೆ ಎಂಬುದಾಗಿ ಬರೆಸಿದ್ದೇನೆ ಎಂದರೆ ಸರಿ. ಗಿರೀಶನಿಗೆ 18 ಲಕ್ಷ ಹಣ ಕೊಡು ನನ್ನ ಮಗಳಿಗೆ ಯಾವುದೇ ಕೆಲಸ ಬೇಡ ಎಂದು ಹೇಳಿದಾಗ ಗಿರೀಶ ಆರೋಪಿಯ ಚೆಕ್ಕುಗಳನ್ನು ನನಗೆ ಕೊಟ್ಟಿದ್ದಾರೆ ಎಂದರೆ ಆರೋಪಿಯೇ ಚೆಕ್ಕುಗಳನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿಯನ್ನು ನಾನು ನೋಡೇ ಇಲ್ಲ, ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ, ನಾನು ಮತ್ತು ಗಿರೀಶ ಸೇರಿ ಆರೋಪಿಯ ಚೆಕ್ಕುಗಳ ಮೇಲೆ ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ, ಮಡಿಕೇರಿ.**